Email: academic.pg@kud.ac.in ಕರ್ನಾಟಕ ವಿಶ್ವವಿದ್ಯಾಲಯ Phone: (0836) 2215270
Website: kud.ac.in ಪಾವಟೆನಗರ ಧಾರವಾಡ-580003

KARNATAK UNIVERSITY,

Pavate Nagar, Dharwad-580 003

Academic (PG/Ph.D) Section 'A' Grade NAAC Accredited
ವಿದ್ಯಾಮಂಡಳ (ಪಿಜಿ/ಪಿಎಚ್.ಡಿ)ವಿಭಾಗ University Potential for Excellence "ಚುನಾವಣೆ ಪರ್ವ ದೇಶದ ಗರ್ವ"

No.KU/Aca/P.G./Ph.D/Crt/2026-27/11 Date :10.07.2026

## ಸುತ್ತೋಲೆ

ವಿಷಯ:ಸನ್ 2026-27ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ 1ನೇ ವರ್ಷದ ಹೆಚ್ಚುವರಿ ಮತ್ತು 2ನೇ ವರ್ಷದ ಶುಲ್ಕಗಳನ್ನು ನಿಗದಿಪಡಿಸಿರುವ ಕುರಿತು.

ಉಲ್ಲೇಖ:1.ಸಿಂಡಿಕೇಟ್ ಸಭೆಯ ಠರಾವು ಸಂಖ್ಯೆ:24 ದಿನಾಂಕ:29.06.2026
2.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:10.07.2026

ಎಲ್ಲ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು/ ನಿರ್ದೇಶಕರುಗಳು/ ಸಂಯೋಜಕರು ಕ.ವಿ.ವಿ ಧಾರವಾಡ/ ಆಡಳಿತಾಧಿಕಾರಿಗಳು ಕಾರವಾರ/ಗದಗ ಇವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಉಲ್ಲೇಖಿತ-01ರ ಪ್ರಕಾರ 2026-27ನೇ ಸಾಲಿನ ಸ್ನಾತಕೋತ್ತರ/ ಸ್ನಾತಕೋತ್ತರಡಿಪ್ಲೋಮಾ / ಡಿಪ್ಲೋಮಾ / ಆಡ್ವಾನ್ಸ್‌ಡಿಪ್ಲೋಮಾ / ಸರ್ಟಿಫಿಕೇಟ್ ಕೋರ್ಸುಗಳಿಗೆ ಮೊದಲನೇ ವರ್ಷದ ಸಾಮಾನ್ಯ ಶುಲ್ಕವನ್ನು 25% ರಷ್ಟು ಮತ್ತು ಹೆಚ್ಚುವರಿ/ಸ್ವಆರ್ಥಿಕ ಶುಲ್ಕಗಳನ್ನು 10% ರಷ್ಟು ಹೆಚ್ಚಿಸಲಾಗಿದೆ. ಮತ್ತು 2026-27ನೇ ಸಾಲಿನ ಸ್ನಾತಕೋತ್ತರ ಕೋರ್ಸುಗಳ ಎರಡನೇ ವರ್ಷದ ಶುಲ್ಕಗಳನ್ನುಯಥಾವತ್ತಾಗಿ ನಿಗದಿಪಡಿಸಲಾಗಿದ್ದು, ಸದರ ಪ್ರವೇಶ ಶುಲ್ಕದ ರಚನಾ ಯಾದಿಯನ್ನು ಈ ಮೂಲಕ ಪ್ರಕಟಪಡಿಸಲಾಗಿದೆ.

ಪ್ರಚಲಿತ ಸರ್ಕಾರಿ ಆದೇಶದ ಅನುಸಾರ ನಿಬಂಧನೆಗೊಳಪಟ್ಟು ವಿದ್ಯಾರ್ಥಿಗಳಿಗೆ ಈ ಕೆಳಗಿನ ಅಂಶಗಳನ್ನು ಅನುಸರಿಸಬೇಕು.

1. ಸ್ನಾತಕೋತ್ತರ/ ಸ್ನಾತಕೋತ್ತರಡಿಪ್ಲೋಮಾ /ಡಿಪ್ಲೋಮಾ /ಅಡ್ವಾನ್ಸ್ ಡಿಪ್ಲೋಮಾ/ ಸರ್ಟಿಫಿಕೇಟ್ ಪದವಿಗಳಿಗೆ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-**1**/ ಹಿಂದುಳಿದವರ್ಗ (**2**ಎ,**2**ಬಿ,**3**ಎ,**3**ಬಿ) ಮತ್ತು ಅಲ್ಪಸಂಖ್ಯಾತರ (Muslim, Christian, Jain, Sikh, Boudha, Parsi) ವಿದ್ಯಾರ್ಥಿಗಳು ಎಸ್ಎಸ್‌ಪಿ ಪೋರ್ಟಲ್ **(SSP Portal)** ಮೂಲಕ ಶಿಷ್ಯವೇತನಕ್ಕಾಗಿ ಕಡ್ಡಾಯವಾಗಿ ಅರ್ಜಿ ಸಲ್ಲಿಸುವುದು. ಅಂತಹ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಶಿಷ್ಯವೇತನದ ಮೊತ್ತವು ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ಜಮೆಯಾಗುತ್ತದೆ. ಆದ್ದರಿಂದ, ಸದರಿ ವಿದ್ಯಾರ್ಥಿಗಳು ಸನ್ **2026-27**ನೇ ಸಾಲಿನಲ್ಲಿ ಸ್ನಾತಕೋತ್ತರ ಪ್ರವೇಶ ಪಡೆಯುವ ಸಮಯದಲ್ಲಿ ಪೂರ್ಣ ಶುಲ್ಕವನ್ನು ಭರಿಸುವುದು.
2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಸಲ್ಲಿಸುವ ಆದಾಯ ಪ್ರಮಾಣ ಪತ್ರದ ಕಾಲಾವಧಿಯು 5 ವರ್ಷಗಳವರೆಗೆ ಊರ್ಜಿತವಾಗಿರುವುದರಿಂದ ವಿದ್ಯಾರ್ಥಿಗಳು ಸರಕಾರದ ಸಂಬಂಧಿಸಿದ ಇಲಾಖೆಯಿಂದ ಪಡೆದ 5 ವರ್ಷದೊಳಗಿನ ಚಾಲ್ತಿಯಲ್ಲಿರುವ ಆದಾಯ ಪ್ರಮಾಣ ಪತ್ರ ಸಲ್ಲಿಸಬೇಕು.
3. ಕರ್ನಾಟಕ ಮತ್ತು ಸರಕಾರಿ ಆದೇಶ ಸಂಖ್ಯೆ: ಇಡಿ/35/ಇಜಿಒವಿ/2021 ದಿ:04.11.2021ರ ಪತ್ರದಲ್ಲಿ ಹಾಗೂ ಸರಕಾರದ ಆದೇಶ ಸಂಖ್ಯೆ:AGRI_AML/141/2021,ಬೆಂಗಳೂರು ದಿನಾಂಕ:07.08.2021ರಲ್ಲಿ ತಿಳಿಸಿದಂತೆ ರೈತರ ಮಕ್ಕಳ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು ಹೊಸ ಶಿಕ್ಷಣ ವೇತನ (Scholarship) ಯೋಜನೆಯನ್ನು ಜಾರಿಗೆ ತರಲಾಗಿದ್ದು ಅದರಂತೆ, ಈ ಶಿಷ್ಯವೇತನವನ್ನು ಕರ್ನಾಟಕ ರಾಜ್ಯದ ಎಲ್ಲಾ ವರ್ಗದ ರೈತರ ಮಕ್ಕಳು ರಾಜ್ಯದ ಇತರೆ ಯಾವುದೇ (SC/ST/OBC/Minority)

ಶಿಷ್ಯವೇತನವನ್ನು ಪಡೆಯಲು ಆಗದಿದ್ದಲ್ಲಿ, ರೈತರ ಮಕ್ಕಳ ಶಿಷ್ಯವೇತನಕ್ಕೆ http://ssp.postmartic.karnataka.gov.in ಪೋರ್ಟಲ್ ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

4. ಸ್ನಾತಕೋತ್ತರ ಕೋರ್ಸಗೆ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 /ಹಿಂದುಳಿದ ವರ್ಗ2ಎ,2ಬಿ,3ಎ,3ಬಿ ವಿದ್ಯಾರ್ಥಿಗಳು ಈ ಮೊದಲು ಕರ್ನಾಟಕ ವಿಶ್ವವಿದ್ಯಾಲಯದಿಂದ ನಿಯಮಿತವಾಗಿ (Regular) ಸ್ನಾತಕೋತ್ತರ ಕೋರ್ಸ ಪೂರ್ಣಗೊಳಿಸಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಪುನಃ ಬೇರೆ ಸ್ನಾತಕೋತ್ತರ ಕೋರ್ಸಗೆ ಪ್ರವೇಶ ಪಡೆದಲ್ಲಿ, ಸರ್ಕಾರದಿಂದ ಶಿಷ್ಯವೇತನ ಮಂಜೂರಾಗುವುದಿಲ್ಲ. ಆದ್ದರಿಂದ, ಅಂತಹ ವಿದ್ಯಾರ್ಥಿಗಳಿಂದ ಪೂರ್ಣ ಶುಲ್ಕವನ್ನು ಭರಿಸಿಕೊಳ್ಳುವುದು.

5. ಸ್ನಾತಕೋತ್ತರ ಕೋರ್ಸಿನ ಮೊದಲನೇ ವರ್ಷಕ್ಕೆ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳು ಕಾರಣಾಂತರಗಳಿಂದ ಒಂದು ತಿಂಗಳ ನಂತರ ಕೋರ್ಸನ್ನು ಅರ್ಧಕ್ಕೆ ಮೊಟಕುಗೊಳಿಸಿದರೆ, ಅಂತಹ ವಿದ್ಯಾರ್ಥಿಗಳು ಸದರ ಕೋರ್ಸಿನ ಎರಡನೇ ವರ್ಷದ ಪೂರ್ಣ ಶುಲ್ಕವನ್ನು ಕಡ್ಡಾಯವಾಗಿ ಭರಿಸುವುದು.

6. ಸ್ನಾತಕೋತ್ತರ/ ಸ್ನಾತಕೋತ್ತರಡಿಪ್ಲೋಮಾ /ಡಿಪ್ಲೋಮಾ /ಅಡ್ವಾನ್ಸ್ ಡಿಪ್ಲೋಮಾ/ ಸರ್ಟಿಫಿಕೇಟ್ ಪದವಿ ಕಾರ್ಯಕ್ರಮಗಳ ಪ್ರವೇಶ ಶುಲ್ಕವನ್ನು ವಿದ್ಯಾರ್ಥಿಗಳು ಭರಿಸಿದ ಚಲನ್‌ಗಳ 4 ಪ್ರತಿಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕು.

N. Ramu
ಕುಲಸಚಿವರು 16/7/26

ಅಡಕ : ಶುಲ್ಕ ರಚನಾ ಯಾದಿ

**ಗೆ,**

1. ಅಧ್ಯಕ್ಷರು/ಸಂಯೋಜಕರು, ಎಲ್ಲ ಸ್ನಾತಕೋತ್ತರ ವಿಭಾಗಗಳು, ಕ.ವಿ.ವಿ ಧಾರವಾಡ.
2. ಆಡಳಿತಾಧಿಕಾರಿಗಳು, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ, ಗದಗ,ಕಾರವಾರ.
3. ಸಂಯೋಜಕರು,ಎಂ.ಕಾಂ./ಎಂ.ಕಾಂ. (ಸಿ.ಎಸ್.), ಎಂ.ಟಿ.ಎ, ಇಂಗ್ಲೀಷ, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ,ಧಾರವಾಡ.
4. ಸಂಯೋಜಕರು, ಎಂ.ಎಸ್ಸಿ (ರಸಾಯನಶಾಸ್ತ್ರ, ಭೌತಶಾಸ್ತ್ರ, ಗಣಕ ವಿಜ್ಞಾನ ಮತ್ತು ಗಣಿತಶಾಸ್ತ್ರ) ಸ್ನಾತಕೋತ್ತರ ಅಧ್ಯಯನ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
5. ಸಬಲೀಕರಣ ಅಧಿಕಾರಿಗಳು, ವಿದ್ಯಾರ್ಥಿಧಾಮ, ಕ.ವಿ.ವಿ.ಧಾರವಾಡ.
6. ಉಪಕುಲಸಚಿವರು (ಎಸ್.ಸಿ/ಎಸ್‌ಟಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಘಟಕ. ಕ.ವಿ.ವಿ. ಧಾರವಾಡ.
7. ವಿಶೇಷಾಧಿಕಾರಿಗಳು ಪ್ರವರ್ಗ-1 ಘಟಕ. ಕ.ವಿ.ವಿ. ಧಾರವಾಡ.
8. ವಿಶೇಷಾಧಿಕಾರಿಗಳು ಅಲ್ಪಸಂಖ್ಯಾತರ ಹಿಂದುಳಿದ ವರ್ಗ ಘಟಕ ಕ.ವಿ.ವಿ. ಧಾರವಾಡ.

**ಪ್ರತಿ ಸಾದರಪೂರ್ವಕವಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1. ಕುಲಸಚಿವರು (ಮೌಲ್ಯಮಾಪನ) ಕ.ವಿ.ವಿ ಧಾರವಾಡ.
2. ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ ಕ.ವಿ.ವಿ. ಧಾರವಾಡ.
3. ನಿರ್ದೇಶಕರು, ಸಿ.ಡಿ.ಸಿ./ಯುಇಐಜಿಬಿ/ಕ್ರೀಡಾ/ವಿದ್ಯಾರ್ಥಿ ಕಲ್ಯಾಣ/ಎನ್.ಎಸ್.ಎಸ್. ಕ.ವಿ.ವಿ. ಧಾರವಾಡ.
4. ನಿರ್ದೇಶಕರು, ಕಂಪ್ಯೂಟರ್ ನೆಟವರ್ಕ,ಇಂಟರನೆಟ್ ವಿಭಾಗ, ಕ.ವಿ.ವಿ. ಧಾರವಾಡ.
5. ಅಧೀಕ್ಷಕರು, ಸಿ.ಡಿ.ಸಿ./ಯುಇಐಜಿಬಿ/ಕ್ರೀಡಾ/ವಿದ್ಯಾರ್ಥಿ ಕಲ್ಯಾಣ/ಎನ್.ಎಸ್.ಎಸ್/ಹಣಕಾಸು ವಿಭಾಗ ಕ.ವಿ.ವಿ. ಧಾರವಾಡ.
6. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕ.ವಿ.ವಿ. ಧಾರವಾಡ.
7. ಆಪ್ತ ಕಾರ್ಯದರ್ಶಿಗಳು, ಕುಲಸಚಿವರ ಕಾರ್ಯಾಲಯ, ಕ.ವಿ.ವಿ. ಧಾರವಾಡ.
8. ಆಪ್ತ ಕಾರ್ಯದರ್ಶಿಗಳು, ಕುಲಸಚಿವರ (ಮೌಲ್ಯಮಾಪನ) ಕಾರ್ಯಾಲಯ, ಕ.ವಿ.ವಿ. ಧಾರವಾಡ.